ತಾಲ್ಲೂಕಿನಲ್ಲಿಯೂ ಕೂಡ ಕೆಲವು ಪ್ರದೇಶದಲ್ಲಿ ಅತಿವೃಷ್ಟಿ ಆಗಿರುವುದು. ಇದರಿಂದ ಸುಮಾರು ೩೬ ಗ್ರಾಮಗಳಲ್ಲಿ ಸ್ವಲ್ಪ ಹಾನಿ ಉಂಟಾಗಿದೆ. ಸುಮಾರು ೪೦ ಮನೆಗಳು ಪೂರ್ತಿ ಕುಸಿದಿದ್ದು ಸುಮಾರು ೮೩೬ ಮನೆಗಳಿಗೆ ಭಾಗಶಃ ನಷ್ಟ ಉಂಟಾಗಿದೆ.

ಸ್ಥಳೀಯ ಅಧಿಕಾರಿಗಳ ವರದಿಯಂತೆ ಈ ರೀತಿ ಮನೆಗಳಿಗೆ ಹಾನಿ ಉಂಟಾಗಿರುವುದು ಕಂಡುಬರುತ್ತದೆ. ಇತರೆ ಹಾನಿ ಅಥವಾ ನಷ್ಟದ ಬಗ್ಗೆ ವರದಿ ಇರುವುದಿಲ್ಲ. ತೊಂದರೆ ಒಳಗಾದವರಿಗೆ ದಿನಾಂಕ ೮-೬-೧೯೮೮ರ ಪ್ರಕಾರ ಪರಿಷ್ಕೃತ ಸರ್ಕಾರಿ ಆಜ್ಞೆಯಂತೆ ಪರಿಹಾರ ನೀಡಲಾಗುತ್ತಿದೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಮನೆಗಳಿಗೆ ಆಗಿರುವ ನಷ್ಟದ ಅಂದಾಜು ಸುಮಾರು ರೂ. ೪.೧೮ ಲಕ್ಷ. ನಿಯಮಾನುಸಾರ ಸುಮಾರು ರೂ. ೧.೧೦ ಲಕ್ಷ ಪರಿಹಾರ ನೀಡಬೇಕಾಗುವುದು. ಈಗಾಗಲೇ ರೂ. ೨೫.೦೦೦ ನೊಂದವರಿಗೆ ವಿತರಿಸಲಾಗಿದೆ. ಉಳಿದವರಿಗೆ ಪರಿಹಾರ ನೀಡುವ ಹಂತದಲ್ಲಿ ಇರುವುದು.

೬. ಶಿವಮೊಗ್ಗ ಕ್ಷೇತ್ರದ ಹಳ್ಳಿಯ ದಸ್ತಗಿರ್ ಮತ್ತು ಯೂಸೂಫ್, ಎನ್ನುವ ಕೃಷಿ ಕಾರ್ಮಿಕರ ಮೇಲೆ ಅರಣ್ಯ ಅಧಿಕಾರಿಗಳು ಗುಂಡು ಹಾರಿಸಿರುವುದು.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನನ್ನ ಮೂಕದಾರ ಕ್ಷೇತ್ರದ ಹಳ್ಳಿಯಲ್ಲಿ ವಾಸವಾಗಿರುವಂತಹ ಯೂಸೂಫ್ ಮತ್ತು ದಸ್ತಗಿರ್ ಎಂಬ ಮಧ್ಯವಯಸ್ಸಿನ ಇಬ್ಬರು ಕೃಷಿ ಕಾರ್ಮಿಕರು ಸಕ್ಕರೆಬೈಲ್ ಅರಣ್ಯಕ್ಕೆ ಒಣಗಿಬಿದ್ದ ಸೌದೆಯನ್ನು ತರುವುದಕ್ಕೆ ಹೋದಾಗ ಅಲ್ಲಿದ್ದ ಹಿರಿಯ ಅರಣ್ಯಾಧಿಕಾರಿಗಳು ಅವರ ಮೇಲೆ ಗುಂಡನ್ನು ಹಾರಿಸಿದ್ದಾರೆ. ಇದರಿಂದ ತುಂಬಾ ತೀವ್ರತರವಾದ ಗಾಯಗಳು ಅವರಿಗೆ ಆಗಿವೆ. ಕೂಡಲೇ ಅವರಿಗೆ ಚಿಕಿತ್ಸೆ ಮಾಡಿಸಲು ಶಿವಮೊಗ್ಗದಲ್ಲಿರುವ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋದರು, ಆದರೆ ಆಲ್ಲಿ ಅವರಿಗೆ ಚಿಕಿತ್ಸೆ ನೀಡಲು ಸಾಧ್ಯವಾಗದ ಕಾರಣ ದಾವಣಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆಂದು ನನಗೆ ತಂತಿ ಸಮಾಚಾರ ಬಂದಿದೆ. ಆಕಸ್ಮಾತ್ ದಾವಣಗೆರೆಯಲ್ಲಿ ಅವರಿಗೆ ಚಿಕಿತ್ಸೆ ನೀಡಲು ಸಾಧ್ಯವಾಗದಿದ್ದರೆ ತಕ್ಷಣವೇ ಸರ್ಕಾರದವರು ಒಬ್ಬ ಉನ್ನತಾಧಿಕಾರಿಯ ಜೊತೆಯಲ್ಲಿ ಅವರನ್ನು ಬೆಂಗಳೂರಿಗೆ ಕರೆಸುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕು. ಇದರಲ್ಲಿ ಅರಣ್ಯಾಧಿಕಾರಿಗಳದ್ದು ತಪ್ಪಿದೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿಸಿ ಅವರ ಮೇಲೆ ಕ್ರಮ ಕೈಕೊಳ್ಳಬೇಕು ಮತ್ತು ಗಾಯಗೊಂಡವರಿಗೆ ಸೂಕ್ತ ಚಿಕಿತ್ಸೆ ನೀಡುವ ವ್ಯವಸ್ಥೆಯಾಗಬೇಕು ಹಾಗೂ ಅವರಿಗೆ ಪರಿಹಾರಕ್ಕಾಗಿ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಟಿಲಿಗ್ರಾಂ ಕಾಪಿಯನ್ನು ಕಳುಹಿಸಿಕೊಟ್ಟಿದ್ದಾರೆ. ಹಾಗೂ ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆದ್ದರಿಂದ ಇದರ ಬಗ್ಗೆ ವಿಚಾರಣೆ ಮಾಡುವುದರ ಜೊತೆಗೆ ಫೈರಿಂಗ್‌ನಲ್ಲಿ ಗಾಯಗೊಂಡಿರುವ ಇಬ್ಬರಿಗೆ ದಾವಣಗೆರೆಯಲ್ಲಿ ಸೂಕ್ತ ಚಿಕಿತ್ಸೆ ಸಿಗದಿದ್ದರೆ ಅವರನ್ನು ಬೆಂಗಳೂರಿಗೆ ಕರೆಸಿಕೊಂಡು ಸೂಕ್ತ ಚಿಕಿತ್ಸೆ ಕೊಡಿಸುವ ಬಗ್ಗೆ ಸರ್ಕಾರ ತಕ್ಷಣವೇ ಕ್ರಮ ಕೈಕೊಳ್ಳುತ್ತದೆಂದು ಹೇಳುತ್ತೇನೆ.

ನಿಯಮ ೬೮ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ.

೭. ದಾವಣಗೆರೆ ಮತ್ತು ಇತರೆ ಕಡೆಗಳಲ್ಲಿ ಟೆಕ್ಸ್‌ಟೈಲ್ ಮಿಲ್ಲುಗಳು ಮುಚ್ಚಿ ಹೋಗಿರುವುದರಿಂದ ಕಾರ್ಮಿಕರು ಬೀದಿಪಾಲಾಗಿರುವುದು.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ನಾನು ಈ ದಿನ ಬೆಳಿಗ್ಗೆ ೮ ಗಂಟೆಗೆ ಬಂದೆ. ಈಗ ರಾತ್ರಿ ೮ ಗಂಟೆಯಾಗಿದೆ. ಒಟ್ಟಿನಲ್ಲಿ ಕಾರ್ಮಿಕರ ಬಗ್ಗೆ ಈ ಸದನದಲ್ಲಿ ಮಾತನಾಡುವುದಕ್ಕೆ ನನಗೆ ಅವಕಾಶ ಸಿಕ್ಕಿತು ಎಂಬ ತೃಪ್ತಿಯಿಂದ ನಾನು ತಪುಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಇಲ್ಲಿ ಅನೇಕ ಸಂದರ್ಭಗಳಲ್ಲಿ ಕಾರ್ಮಿಕರ ಬಗ್ಗೆ ಮಾತನಾಡುವಾಗ ನಾನು ಮಾತನಾಡಿದ್ದು ಕಡಿತಕ್ಕೆ ಹೋಗುವುದಿಲ್ಲ